3) Harassment caused to the children born out of inter-caste marriages particularly between Scheduled Castes/Scheduled Tribes and other castes and the remedial measures contemplated by the Government

SRI K. V. RAVINDRANATH BABU.— Sir, I call the attention of Minister for Social Welfare to the harassment meted out to the children born out of inter-caste marriages particularly between Scheduled Castes/Scheduled Tribes and other castes and the remedial measures contemplated by the Government.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).— ಅಧ್ಯಕ್ಷರೇ, ಮಾನ್ಯ ಜಿ. ಬಸವಣ್ಣಪ್ಪನವರ ಪರವಾಗಿ ಈ ಕೆಳಕಂಡ ಉತ್ತರವನ್ನು ಓದುತ್ತೇನೆ.

ಅಂತರ ಜಾತಿಯ ವಿವಾಹವಾದವರ ಮಕ್ಕಳಿಗೆ ಆಗುತ್ತಿರುವ ಕಿರುಕುಳಗಳ ಪ್ರಕರಣಗಳು ಹಾಗೂ ಇಂತಹ ಕಿರುಕುಳಗಳ ಸ್ವಭಾವ ಇತ್ಯಾದಿಗಳು ಈ ವರೆಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಅಂತರ ಜಾತಿಯ ವಿವಾಹದ ದಂಪತಿಗಳ ಪೈಕಿ ಒಬ್ಬರು ಪರಿಶಿಷ್ಟಜಾತಿಗೆ ಸೇರಿದವರಾಗಿದ್ದಲ್ಲಿ, ಅಸ್ಪೃಶ್ಯತಾ ನಿವಾರಣೆ ಯೋಜನೆಯ ಕೆಳಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ರೂ ೫,೦೦೦ ಧನ ಸಹಾಯ ನೀಡುವ ಯೋಜನೆ ಇದೆ. ಇದಲ್ಲದೆ ಇಂತಹ ದಂಪತಿಗಳ ಮಗುವಿನ ಸ್ಥಾನಮಾನದ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯ ಉಚ್ಚರಿಸಿದ ಕಾನೂನಿನ ಅಭಿಪ್ರಾಯ ಈ ರೀತಿ ಇದೆ. ಮಗುವಿನ ತಂದೆ ಅಥವಾ ತಾಯಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಗಳ ಸದಸ್ಯ ಆಗಿರಲಿ ಅಥವಾ ಇಲ್ಲದಿರಲಿ, ಈ ಮಗುವು ಪರಿಶಿಷ್ಟ ಜಾತಿ; ಪರಿಶಿಷ್ಟ ವರ್ಗದ ಸಮಾಜದ ಸದಸ್ಯನೆಂದು ಪರಿಗಣಿಸಲಾಗುವುದು. ಮತ್ತು ಎಲ್ಲಾ ಪ್ರಯೋಜನೆಗಳನ್ನು ಪಡೆಯಲು ಅರ್ಹತೆ ಹೊಂದಿರುವುದು ಆದರೆ ಇಲ್ಲಿ ಪರಿಗಣಿಸಬೇಕಾದ ಮುಖ್ಯ ಅಂಶವೇನೆಂದರೆ, ಆ ದಂಪತಿಗಳು ಯಾವ ಸಮಾಜಕ್ಕೆ ಸೇರಿರುವರೋ ಆ ಸಮಾಜ ಅವರನ್ನು ಅಂಗೀಕರಿಸಿದಲ್ಲಿ ಅವರ ಮಕ್ಕಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಪರಿಗಣಿಸಬಹುದಾಗಿದೆ.

ಅಂತರ ಜಾತಿ ವಿವಾಹವಾದವರ ಮಕ್ಕಳಿಗೆ ಆಗುತ್ತಿರುವ ಕಿರುಕುಳಗಳ ಸ್ವಭಾವವನ್ನು ನಿರ್ದಿಷ್ಟ ಪ್ರಕರಣಗಳೊಂದಿಗೆ ಸರ್ಕಾರದ ಗಮನಕ್ಕೆ ತಂದಲ್ಲಿ ಪರಿಹಾರಾತ್ಮಕ ಕ್ರಮಗಳನ್ನು ಯೋಚಿಸಲಾಗುವುದು

ಶ್ರೀ ಕೆ.ವಿ ರವೀಂದ್ರನಾಥ ಬಾಬು.—ಅಧ್ಯಕ್ಷರೇ, ಈ ಇಂಟರ್ ಕ್ಯಾಸ್ಟ್ ಮ್ಯಾರೇಜಸ್‌ಗೆ ಸರ್ಕಾರ ಪ್ರೋತ್ಸಾಹ ಕೊಡುತ್ತಿದೆ. ಆದರೆ ಅವರಿಗೆ ಮಕ್ಕಳಾದ ಮೇಲೆ ಸರ್ಕಾರ ಅಂಥವರನ್ನು ಕಾಡಿಸ ತೊಡಗುತ್ತದೆ. ಕೆಲಸಕ್ಕೆ ಸೇರಬೇಕೆಂದು ಅವರು ಅಧಿಕಾರಿಗಳ ಹತ್ತಿರ ಹೋದರೆ ನಿಮ್ಮಪ್ಪ ಯಾವ ಜಾತಿ ನಿಮ್ಮಮ್ಮ ಯಾವ ಜಾತಿ ಎಂದು ಕೇಳಿ ಇಲ್ಲದ ಕಿರುಕುಳ ಕೊಡುತ್ತಾರೆ. ಕೆಲವೊಮ್ಮೆ ಅಫಿಡವಿಟ್ ತನ್ನಿ ಎಂದಾಗ ಕೋರ್ಟ್‌ಗೂ ಹೋಗಬೇಕಾಗುತ್ತದೆ. Mentally they are depressed. Why should they be not classified under one group ? ಆದ್ದರಿಂದ ಎಸ್‌ಸಿ ಎಸ್‌ಟಿಗಳಿಗೆ ಯಾವ್ಯಾವ ಫೆಸಿಲಿಟಿ ಕೊಡಲಾಗುತ್ತಿದೆಯೋ ಅದನ್ನೇ ಇವರಿಗೂ ವಿಸ್ತರಿಸಬೇಕೆಂದು ಕೋರುತ್ತೇನೆ,

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ —ಅಂತರ್‌ಜಾತಿ ವಿವಾಹವೆಂದರೆ ಬೇರೆ ಜಾತಿಗಳ ನಡುವೆ ಯದು ಇರಬಹುದು ಅಥವಾ ಅವುಗಳ ಒಳಪಂಗಡಗಳ ನಡುವೆಯೂ ಆಗಬಹುದು. ಅಂಥವರಿಗೆ ಸಕಲ ಪ್ರೋತ್ಸಾಹ ಸಿಗದಿದ್ದರೆ ಅವರು ಮುಂದೆ ಬರಲು ಆಗುವುದಿಲ್ಲ. ಒಬ್ಬ ಪರಿಶಿಷ್ಟ ಮಹಿಳೆ ಬೇರೆ ಜಾತಿ ಗಂಡಸನ್ನು ಮದುವೆಯಾದರೆ ಅವರಿಗಾಗುವ ಪಂಗುವಿಗೆ ಪರಿಶಿಷ್ಟ ಜಾತಿಯ ಸವಲತ್ತು ಸಿಗುತ್ತಿಲ್ಲ. ಆದ್ದರಿಂದ ಅಂಥ ಮಕ್ಕಳಿಗೆಲ್ಲ ಪರಿಶಿಷ್ಟ ಜಾತಿಗೆ ಸಿಗುವ ಸವಲತ್ತು ದೊರಕುವಂಥಾ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅಂತಹ ನಿರ್ದಿಷ್ಟ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಪರಿಹಾರಿಕ ಕ್ರಮ ಕೈಗೊಳ್ಳಲಾಗುವುದು ಎಂದು ಆಗಲೇ ಹೇಳಿದ್ದೇನೆ. ಇನ್ನೊಂದು, ಶ್ರೀ ಬಾಬು

ಅವರು ಅಫಿಡವಿಟ್ ತರಲು ಕೋರ್ಟ್‌ಗೆ ಅಲೆಯಬೇಕಾಗುತ್ತದೆ ಎಂದರು ಅದರ ಅಗತ್ಯವಿಲ್ಲ. ಕೇವಲ ಪಬ್ಲಿಕ್ ನೋಟರಿ ಅವರು ಇವರನ್ನು ನಾನು ನೋಡಿದ್ದೇನೆ, ಇವರು ಹೇಳುತ್ತಿರುವುದು ನಿಜ ಎಂದು ಸರ್ಟಿಫೈ ಮಾಡಿದರೆ ಸಾಕು. ಅದು ಬಿಟ್ಟು ಕೋರ್ಟಿಗೆ ಅರ್ಜಿ ಹಾಕಬೇಕಾಗಿಲ್ಲ. ಡಿಕ್ರಿ ತಗೊಳ್ಳಬೇಕಾಗಿಲ್ಲ. ಮತ್ತೆ ನೀವು ಇದನ್ನು ಕ್ಲಾರಿಫೈ ಏತಕ್ಕೆ ಮಾಡಬಾರದೆಂದು ಮಾನ್ಯ ಬಾಬುರವರು ಕೇಳಿದ್ದಾರೆ. ನಾನು ಸುಪ್ರೀಂ ಕೋರ್ಟ್‌ನಿಂದ ಆಗಿರತಕ್ಕ ತೀರ್ಮಾನದ ಒಂದು ಪಾಕ್ಯವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ನಾನು ಓದಿದ್ದೇನೆ, ಅದು ಅವರಿಗೆ ಸರಿಯಾಗಿ ಅರ್ಥವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಇಂಗ್ಲೀಷ್‌ನಲ್ಲಿರುವುದನ್ನು ಓದಿದರೆ ಅದರ ಅರ್ಥ ಮಾನ್ಯ ಸದಸ್ಯರ ಮನಸ್ಸಿಗೆ ನಾಟುತ್ತದೆಂದು ನಾನು ಅಂದುಕೊಂಡಿದ್ದೇನೆ ಅದು ಈ ರೀತಿ ಇದೆ.

> " Where the child irrespective of the fact that whether the father or the mother as a member of the Scheduled Castes/Tribes community is brought up in the Scheduled Castes/Tribes community as a member of such community then he is to be treated as a member of the Scheduled Castes/Tribes community and would be entitled to receive benefits as such.

ಇದು ಸ್ವಯಂ ತಿಳುವಳಿಕೆಯಿಂದ ಕೂಡಿರತಕ್ಕ ವಾಕ್ಯವೆಂದು ನಾನು ಅಂದುಕೊಂಡಿದ್ದೇನೆ. ನಿರ್ದಿಷ್ಟವಾಗಿ ತೊಂದರೆಗೊಳಗಾದ ಪ್ರಕರಣಗಳನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಕ್ರಮ ತೆಗೆದುಕೊಂಡು ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದು ಅನುಲೋಮ ಪ್ರತಿಲೋಮಕ್ಕೆ ಸಂಬಂಧಿಸಿದಂಥಾದ್ದು. ಈ ಪ್ರಶ್ನೆ ಇಲ್ಲಿ ಪೂರ್ಣವಾಗಿ ಪ್ರಸ್ತಾಪ ಆಗಿಲ್ಲ. ನಿಮ್ಮ ವರ್ಗದವರಿಗೆ ಸಂಬಂಧಪಟ್ಟಿರತಕ್ಕ ವಿಚಾರವನ್ನು ಇಲ್ಲಿ ಕೊಡಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ನಮ್ಮ ಹಿಂದೂ ಧರ್ಮದ ಪ್ರಕಾರ ಗಂಡನ ಜಾತಿ ಯಾವುದು ಇದೆ, ಅದೇ ಜಾತಿ ಪ್ರಾಮುಖ್ಯವಾಗುತ್ತದೆ. ಇದೇ ರೀತಿಯ ಪ್ರಶ್ನೆಯನ್ನು ಮಾನ್ಯ ಅಂಬೇಡ್ಕರ್‌ರವರು ಮಹಾತ್ಮಗಾಂಧೀಜಿಯವರಿಗೆ ಕೇಳಿದ್ದರು...

ಶ್ರೀ ಎ. ಲಕ್ಷ್ಮೀಸಾಗರ್.—ಅದು ನನಗೆ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಕೆಲವರು ಪೆಡ್ಯೂಲ್ಡ್ ಕ್ಯಾಸ್ಟ್‌ನವರು ಬ್ರಾಹ್ಮಣರನ್ನು ಮದುವೆ ಮಾಡಿಕೊಂಡಿರಬಹುದು ಅಥವಾ ಕೆಲವು ಬ್ರಾಹ್ಮಣರು ಪೆಡ್ಯೂಲ್ ಕ್ಯಾಸ್ಟ್‌ನವರನ್ನು ಮದುವೆ ಮಾಡಿಕೊಂಡಿರಬಹುದು. ಆದರೆ ನಮ್ಮ " ಲಾ " ಪ್ರಕಾರ the caste goes with the male and not with female. ಹೆಣ್ಣುಮಕ್ಕಳ ಜಾತಿಯನ್ನು ನಮ್ಮ ಸಮಾಜ ಇನ್ನೂ ಒಪ್ಪಿಕೊಂಡಿಲ್ಲ. ಇದನ್ನು ಒಪ್ಪಿಕೊಂಡರೆ ಬಹಳ ಸಂತೋಷ. ಸಾಮಾನ್ಯವಾಗಿ ಗಂಡುಮಕ್ಕಳ ಜಾತಿಯನ್ನೇ ಪ್ರಾಮುಖ್ಯವಾಗಿ ತೆಗೆದುಕೊಳ್ಳುತ್ತಿದ್ದೇವೆ. ಗಂಡಸಾದವನು ಪೆಡ್ಯೂಲ್ ಕ್ಯಾಸ್ಟ್ ಆಗಿದ್ದರೆ ಅವನ ಜಾತಿ ಪೆಡ್ಯೂಲ್ಡ್ ಕ್ಯಾಸ್ಟ್ ಆಗುತ್ತದೆ. ಅಥವಾ ಅವನು ಲಿಂಗಾಯಿತ ಜಾತಿಯವನಾಗಿದ್ದರೆ ಅವನ ಜಾತಿ ಲಿಂಗಾಯಿತರೇ ಆಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಹಿಂದೂ ಲಾ ಪ್ರಕಾರ ಇದು ಅನೇಕ ವರ್ಷಗಳಿಂದ ನಡೆದು ಬಂದಿರತಕ್ಕ ದಾರಿ ಇದು. ಹೆಣ್ಣಿಗೆ ಗೋತ್ರ ಇಲ್ಲ ಒಂದು ವೇಳೆ ಗೋತ್ರ ಇದ್ದರೂ ಅದು ಅವಳ ಮದುವೆ ಆದಮೇಲೆ ಗಂಡನ ಗೋತ್ರವನ್ನು ಸ್ವೀಕಾರ ಮಾಡಬೇಕೆಂದಿದೆ. ಮಾನ್ಯ ಖಾರ್ಗೆಯವರು ಹೇಳುತ್ತಿರುವುದೂ ಸರಿ. ಆದರೆ ಇಲ್ಲಿ ಬಂದಿರತಕ್ಕದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸೇರಿದವರು ಬೇರೆ ಉನ್ನತ ಜಾತಿಯವರ ಜೊತೆ ಮದುವೆಯಾದ ಮೇಲೆ ಹುಟ್ಟಿದ ಮಕ್ಕಳು ಯಾವ ಜಾತಿಗೆ ಸೇರುತ್ತವೆ ಎಂದು ಕೇಳಿದ್ದಾರೆ. ಇದಕ್ಕೆ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ.

ಇನ್ನು ಎರಡನೆಯದಾಗಿ, ಈ ನಿಯಮ (ಜಾತಿ ನಿಯಮ) ಆ ಮಕ್ಕಳಿಗೆ ೧೮ ವರ್ಷ ವಯಸ್ಸಾಗುವವರೆಗೆ ಇರುತ್ತದೆ. ಈ ಒಂದು ಅಂಶವನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆದರೆ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಅಪ್ಪನಾದವನ ಜಾತಿ ಏನಿರುತ್ತದೆ ರೂಲ್ಸ್ ಪ್ರಕಾರ ಅದನ್ನೇ ಇಡಬೇಕಾಗುತ್ತದೆ.

SRI A. LAKSHMISAGAR.—For conversion there is permission.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಇಂಟರ್ ಕ್ಯಾಸ್ಟ್ ಮದುವೆ ಮಾಡುವ ಉದ್ದೇಶ ಏನೆಂದರೆ, ಎಲ್ಲಿ ಜಾತಿಯವರೂ ಒಂದೇ ಆಗಿರಬೇಕು ಎಂಬ ದೃಷ್ಟಿಯಿಂದ ಅಂದಮೇಲೆ ಅವರಲ್ಲಿ ಹುಟ್ಟುವ ಮಕ್ಕಳಲ್ಲಿ ನಾವು ಮತ್ತೆ ಹೊಸ ಜಾತಿಯನ್ನು ಏತಕ್ಕೆ ಮಾಡಬೇಕು ಯಾವುದಾದರೂ ನಿರ್ದಿಷ್ಟ ಪ್ರಕರಣವನ್ನು ತಂದುಕೊಟ್ಟರೆ ತನಿಖೆ ಮಾಡಿಸುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಸ್ವಾಮಿ, ಈಗಾಗಲೇ ಸುಮಾರು ೪೦-೫೦ ಕೇಸುಗಳು ಇದಕ್ಕೆ ಸಂಬಂಧಪಟ್ಟಂತೆ ಸಿ. ಒ. ಡಿ. ಯಲ್ಲಿವೆ. ನಿಮ್ಮ ತನಿಖೆ ಆಗುವವರೆಗೂ ಆ ಜನರಿಗೆ ಕೆಲಸ ಇಲ್ಲ. ಅವರನ್ನು ಯಾವ ಕ್ಯಾಸ್ಟ್ ಎಂದು ನೀವು ತೀರ್ಮಾನ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್ —ವಿವಾದಗಳು ಬಂದಾಗ ಕಾನೂನು ಪ್ರಕಾರವೇ ತೀರ್ಮಾನ ಮಾಡಬೇಕಾಗುತ್ತದೆ. ಈಗಾಗಲೇ ಸುಮಾರು ೪೦-೫೦ ಕೇಸುಗಳು ಇಂಥವು ಸಿ. ಒ. ಡಿ.ಯಲ್ಲಿ ಇವೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಇದರ ಬಗ್ಗೆ ಪೂರ್ವಾಪರ ವಿಚಾರವನ್ನು ಮಾಡದೆ ಏಕಾ ಏಕಿ ಯಾವ ತೀರ್ಮಾನವನ್ನು ಕೊಡುವುದಕ್ಕಾಗುವುದಿಲ್ಲ.

ಅಲ್ಲಿ ತಡವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ, ಬೇಗ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವರಿಗೆ ನಿರ್ದೇಶನವನ್ನು ಕೊಡಲಾಗುತ್ತದೆ. ಮತ್ತೆ ಈ ಪದ್ಧತಿಯನ್ನು ಏತಕ್ಕೆ ಬದಲಾವಣೆ ಮಾಡಬಾರದು ? ಮತ್ತೆ ಇದು ಒಂದೇ ರೀತಿಯಲ್ಲಿ ಬರುವುದಕ್ಕೆ ಏತಕ್ಕೆ ಸಹಾಯ ಮಾಡಬಾರದು ? ಎನ್ನುವುದರ ಬಗ್ಗೆ ಕೇಳಿದ್ದಾರೆ. ಇದಂ ಕಾನೂನು ಚೌಕಟ್ಟಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ. ಸುಪ್ರೀಂ ಕೋರ್ಟ್‌ನ ಒಂದು ತೀರ್ಮಾನವನ್ನು ಈಗಾಗಲೇ ಒಂದು ವಿಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ತಂದೆ ತಾಯಿಗಳ ಜಾತಿ ಇರಬೇಕೆ. ಬೇಡವೇ ಎನ್ನುವುದರ ಬಗ್ಗೆ ಆ ಒಂದು ಮಿತಿ ಹದಿನೆಂಟು ವಯಸ್ಸು ಆಗುವವರೆಗೆ ಮಾತ್ರ. ನಂತರ ಹುಡುಗ ಮತ್ತು ಹುಡುಗಿ ಯಾವುದಾದರೂ ಜಾತಿಗೆ ಸೇರುವುದಕ್ಕೆ ಅವಕಾಶ ಇರುತ್ತದೆ. ಅಲ್ಲೇ ಇರಬೇಕು, ಇಲ್ಲೇ ಇರಬೇಕು ಎಂದೇನೂ ಇಲ್ಲ. ಹಿಂದೂ ಧರ್ಮದಲ್ಲಿ ನಾನಾ ವಿಧವಾದಂಥ ಕಟ್ಟಳೆಗಳು ಶಿಕ್ಕುಗಳು ಇವೆ. ಬಹುಶಃ ಈ ಒಂದು ಮಾರ್ಗದಿಂದ ಈ ತೊಂದರೆಗಳು ಕಡಿಮೆಯಾಗಬಹುದು ಎಂದು ತಿಳಿದಿಟ್ಟು ನಾವೆಲ್ಲರೂ ಆಶಿಪಡೋಣ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈಗ ನಿಯಮ ೩೩೪. ಶಿವಾನಂದ ಕೌಜಲಗಿಯವರು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಒಂದೇ ನಿಮಿಷ.

ಅಧ್ಯಕ್ಷರು.—ಅಲ್ರೀ ಗೌಡರೇ, ಈಗಾಗಲೇ ಅವರು ಸವಿಸ್ತಾರವಾಗಿ ಉತ್ತರ ಹೇಳಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ತಮ್ಮ ಪರವಾಗಿ ಮಂತ್ರಿಗಳಲ್ಲಿ ಕೇಳುವುದು ಇಷ್ಟೆ, ತಾಲ್ಲೂಕು ವೈಸ್ ಈ ರೀತಿ ಇಂಟರ್‌ಕ್ಯಾಸ್ಟ್ ಮ್ಯಾರೇಜ್ ಆದಂಥ ಜನರ ಪಟ್ಟಿಯನ್ನು ಏನಾದರೂ ಸರ್ಕಾರ ನೀಡಲಿಕ್ಕೆ ಅನುವು ಮಾಡಿಕೊಡುತ್ತೀರಾ ಅಥವಾ ರಿಜಿಸ್ಟರ್ ಮಾಡಲಿಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಈ ಪಟ್ಟಿಯನ್ನು ತಯಾರು ಮಾಡಿದ ಮೇಲೆ ಇಂಟರ್‌ಕ್ಯಾಸ್ ಮ್ಯಾರೇಜ್ ಮಾಡಿಕೊಂಡಿದ್ದರೆ ಅವರು ಯಾವ ಸಮಾಜಕ್ಕೆ ಸೇರಬೇಕು ಎನ್ನುವುದರ ಬಗ್ಗೆ ಏನಾದರೂ ಒಂದು ವಿಶಿಷ್ಟವಾದಂಥ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ರಿಜಿಸ್ಟರ್ ಆಗುವ ಕಾಲದಲ್ಲಿ ಬದಲಾವಣೆ ಮಾಡಿದರೆ ಬಹುಶಃ ಇವಕ್ಕೆ ಉತ್ತರ ಸಿಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಈಗ ನಿಯಮ ೩೩೪. ಶ್ರೀ ಶಿವಾನಂದ ಕೌಜಲಗಿಯವರು.